# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 762 |
| ಮಾನ್ಯ ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 13-03-2025 |
| ಉತ್ತರಿಸಬೇಕಾದವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಿ/ಕಬ್ಬಲಿಗ/ಬೆಸ್ತ ಪರ್ಯಾಯ ಪದಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತು ಕೇಂದ್ರದ RGI ದಿನಾಂಕ:30.10.2023ರಂದು ಕಳಿಸಿದ ಪತ್ರ ಮತ್ತು ವರದಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೈಗೊಂಡ ಕ್ರಮವೇನು: | ಗಂಗಾಮತ ಮತ್ತು ಅದರ ಉಪ ಜಾತಿಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಲು ಸರ್ಕಾರದ ಆದೇಶ ಸಂಖ್ಯೆ: ಸಕಇ 169 ಎಸ್‌ಎಡಿ 2006, ದಿನಾಂಕ:08/04/2010 ರನ್ವಯ ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ ಹಂಪಿ, ಇವರು ಕುಲಶಾಸ್ತ್ರೀಯ ಅಧ್ಯಯನ ನಡೆಸಿ ಸಲ್ಲಿಸಿದ್ದ ಅಂತಿಮ ವರದಿಯನ್ನು ರಾಜ್ಯ ಸರ್ಕಾರವು ಪರಿಶೀಲಿಸಿ ಸರ್ಕಾರದ ಪತ್ರ ಸಂಖ್ಯೆ: ಸಕಇ 200 ಎಸ್‌ಎಡಿ 2011, ದಿನಾಂಕ:03.03.2014 ರಲ್ಲಿ ಕೇಂದ್ರ ಸರ್ಕಾರಕ್ಕೆ ಗಂಗಾಮತ ಮತ್ತು ಅದರ ಈ ಕೆಳಕಂಡ ವಿವಿಧ ಪಂಗಡಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು.<br><br>"**Bestha,** Ambiga/Ambi, Barki/Barika, Besthar, Bhoyi, Raja Bhoyi, Bunde-Besthar, Daalji, Daavat, Gabit, Galadakonkani, Gangemakkalu, Gangakula, Gangamatha, Gangamathastha, Gangaputra, Gowrimatha, Bunde-Bestha/Gunde-Bestha, Harakanthra, Jalagara, Kabbera/Kabber, **Kabbaliga**, Kabbili, Kahar, Kharvi/Konkan kharvi, **Koli,** Koli mahadev, Maddar, Meenagar, Mogaveera, Moger, Mukkavan, Parivara, Siviyar, Sunagara, Thoreya, Pagi".<br><br>ಮೇಲೆ ನಮೂದಿಸಿರುವ ಜಾತಿಗಳಲ್ಲಿ ಕೋಲಿ, ಕಬ್ಬಲಿಗ, ಬೆಸ್ತ ಸಹ ಒಳಗೊಂಡಿರುತ್ತಾರೆ. ಕೇಂದ್ರ ಬುಡಕಟ್ಟು ಮಂತ್ರಾಲಯ, ಭಾರತ ಸರ್ಕಾರ ಇವರ ದಿನಾಂಕ:30.11.2023ರ ಪತ್ರದಲ್ಲಿ ಗಂಗಾಮತ ಮತ್ತು ಅದರ ಉಪಜಾತಿಗಳನ್ನು ಕರ್ನಾಟಕ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವ ಬಗ್ಗೆ ಭಾರತ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರವರ ವರದಿಯಲ್ಲಿ ಪ್ರಸ್ತಾಪಿಸಿರುವ ಕೆಲವು ಅಂಶಗಳ ಬಗ್ಗೆ ಪರಿಶೀಲಿಸಿ ವರದಿಯನ್ನು |
| ಆ) | ಕೋಲಿ/ಕಬ್ಬಲಿಗ/ಬೆಸ್ತ ಬುಡಕಟ್ಟು ಸಮುದಾಯವು ಮೂಲ ನಿವಾಸಿಗಳು (ABORIGINALS) ಮತ್ತು ಪ್ರಾಚೀನ ಬುಡಕಟ್ಟು ಜನಾಂಗ (PRIMITIVE TRIBES) ಎಂದು ಬ್ರಿಟಿಷರ ಕಾಲದಲ್ಲಿರುವ ದಾಖಲೆಗಳನ್ನು ಸೇರಿಸಿ ಈ ಸಮುದಾಯವನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಲು ಕ್ರಮ ಕೈಗೊಳ್ಳಲಾಗುವುದೇ; | |

| | | |
|---|---|---|
| | | ಸಲ್ಲಿಸುವಂತೆ ತಿಳಿಸಲಾಗಿದೆ. ಅದರಂತೆ, ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಗೆ ದಿನಾಂಕ:28.10.2024ರಂದು ಪತ್ರ ಬರೆದು ಮತ್ತೊಮ್ಮೆ ಸೂಕ್ತ ಸಮರ್ಥನೆ/ ಸ್ಪಷ್ಟೀಕರಣ/ ದಾಖಲೆಗಳೊಂದಿಗೆ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಲಾಗಿದೆ. ಸದರಿ ಸಂಸ್ಥೆಯಿಂದ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರಿಂದ ವರದಿಯನ್ನು ಪಡೆಯಲು ದಿನಾಂಕ: 29.11.2024ರಂದು ಪತ್ರವನ್ನು ಬರೆಯಲಾಗಿದ್ದು, ವರದಿಯನ್ನು ನಿರೀಕ್ಷಿಸಲಾಗುತ್ತಿದೆ. |
| ಇ) | ಕರ್ನಾಟಕ ಎಲ್ಲಾ ಹಿಂದುಳಿದ ವರ್ಗಗಳ ಆಯೋಗಗಳು ಕೋಲಿ/ಕಬ್ಬಲಿಗ/ಬೆಸ್ತ ಬುಡಕಟ್ಟು ಸಮುದಾಯ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ತೀರಾ ಹಿಂದುಳಿದಿದೆ ಮತ್ತು ಎಸ್.ಟಿ ಪಟ್ಟಿಯಲ್ಲಿ ಸೇರಲು ಅರ್ಹತೆ ಹೊಂದಿವೆ ಎಂದು ಹೇಳಿದರೂ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳದಿರಲು ಕಾರಣವೇನು; | ಪ್ರಸ್ತುತ ಗಂಗಾಮತ ಮತ್ತು ಇತರೆ ಸಮುದಾಯಗಳನ್ನು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರಿಸಲು ಶಿಫಾರಸ್ಸು ಮಾಡಿರುವ ಪಟ್ಟಿಯಲ್ಲಿ ಕೋಲಿ, ಕಬ್ಬಲಿಗ, ಬೆಸ್ತ ಸಮುದಾಯಗಳು ಒಳಗೊಂಡಿದ್ದು, ಪ್ರಸ್ತುತ ಕೇಂದ್ರ ಸರ್ಕಾರವು ಕೋರಿರುವ ಅಂಶಗಳ ಬಗ್ಗೆ ಮತ್ತೊಮ್ಮೆ ಸೂಕ್ತ ಸಮರ್ಥನೆ/ ಸ್ಪಷ್ಟೀಕರಣ/ದಾಖಲೆಗಳೊಂದಿಗೆ ವರದಿ ಸಲ್ಲಿಸುವ ಸಂಬಂಧ ಕ್ರಮ ಜರುಗಿಸಲಾಗುತ್ತಿದೆ. |
| ಈ) | ಈಗಾಗಲೇ ಈ ಬುಡಕಟ್ಟು ಸಮುದಾಯದ ಟೋಕರೆ ಕೋಳಿ, ಕೋಳಿ ಡೋರ್, ಕೋಯಾ ಮುಂತಾದವು ಎಸ್.ಟಿ ಪಟ್ಟಿಯಲ್ಲಿದ್ದು ಕೋಲಿ/ಕಬ್ಬಲಿಗ/ ಬೆಸ್ತ/ಅಂಬಿಗ/ಬಾರಿಕೇರ ಪದಗಳನ್ನು ಬಿಟ್ಟು ಹೋದ ಪರ್ಯಾಯ ಪದಗಳೆಂದು ಎಸ್.ಟಿ ಪಟ್ಟಿಯಲ್ಲಿ ಸೇರಿಸಬೇಕೆಂದು ಪ್ರಸ್ತಾವನೆ ಕಳಿಸಲು ಸರ್ಕಾರ ಕಾರ್ಯೋನ್ಮುಖವಾಗುವುದೇ ? | |

**STW/SECB/SAD/26/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ